ಓ.ಎಸ್. ನಂ.**134/2019**

ಪಿ.ಡಬ್ಲೂ.**1**

ದಿನಾಂಕಃ 28.06.2023 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ಶ್ರೀ ಸಿ.ಎಸ್. ವಕೀಲರಿಂದ

ನಾನು ಈ ದಾವೆಯ ವಾದಿಯ ಜಿ.ಪಿ.ಎಯಾಗಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಅಂಶಗಳನ್ನು ನಾನೇ ಹೇಳಿ ಬರೆಯಿಸಿದ್ದೇನೆ ಹಾಗೂ ಅವು ಸತ್ಯವಾಗಿರುತ್ತವೆಂದು ಪ್ರಮಾಣೀಕರಿಸುತ್ತೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ವಾದಿ ಬರೆದುಕೊಟ್ಟ ವಿಶೇಷ ಮುಖ್ತಾರುನಾವೆಯನ್ನು ನಿಪಿ-1 ಎಂದು, ದಿಃ11.02.1972 ರ ಕ್ರಯ ಪತ್ರದ ದೃಢೀಕೃತ ನಕಲು ಪ್ರತಿಯನ್ನು ನಿಪಿ-2 ಎಂದು, ದಿಃ10.04.1969 ರ ಕ್ರಯ ಪತ್ರದ ದೃಢೀಕೃತ ನಕಲು ಪ್ರತಿಯನ್ನು ನಿಪಿ-3 ಎಂದು, ದಿಃ23.11.2015 ರ ದಾನ ಪತ್ರದ ದೃಢೀಕೃತ ನಕಲು ಪ್ರತಿಯನ್ನು ನಿಪಿ-4 ಎಂದು, ಆರ್.ಆರ್.ಟಿ 20/2015-16 ರ ಉಪವಿಭಾಗಾಧಿಕಾರಿ, ಹುಣಸೂರು ರವರ ಮಾಡಿದ ಆದೇಶದ ದೃಢೀಕೃತ ನಕಲು ಪ್ರತಿಯನ್ನು ನಿಪಿ-5 ಎಂದು, ಆರ್.ಆರ್.ಟಿ 20/2015-16 ರ ಮೇಲ್ಮನವಿ ಪತ್ರದ ದೃಢೀಕೃತ ನಕಲು ಪ್ರತಿಯನ್ನು ನಿಪಿ-6 ಎಂದು, ಎಂ.ಆರ್.ಹೆಚ್.30/2015-16 ರ ಮುಟೇಶನ ಪ್ರತಿಯನ್ನು ನಿಪಿ-7 ಎಂದು, ಸ.ನಂ.79/2 ರ ಹಣಕೀಕೃತ ಪಹಣಿಯನ್ನು ನಿಪಿ-8 ಎಂದು, ಸ.ನಂ.79/2 ರ 4 ಕೈಬರಹ ಪಹಣಿಗಳ ದೃಢೀಕೃತ ನಕಲು ಪ್ರತಿಗಳನ್ನು ನಿಪಿ-9 ರಿಂದ 12 ಎಂದು ಗುರುತಿಸಲಾಯಿತು.

**(ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯವನ್ನು ಕೋರಿದ್ದು ಸಮಯವನ್ನು ನೀಡಲಾಯಿತು.)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ,
ನ್ಯಾಯಾಧೀಶರು, ಹುಣಸೂರು.